ಮೂಲ ದಾವಾ ಸಂಖ್ಯೆ 8 /2016 ಪಿ ಡಬ್ಲ್ಯೂ 2 ಕ. ಶೇಖರಪ್ಪ ಬಿನ್ ಲೇಟ್ ನಾಗಪ್ಪ

(ದಿನಾಂಕ 24-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ ಎಂ ಜಿ ವಕೀಲರಿಂದಃ-

ತೋಟಪ್ಪ ನನಗೆ ಪರಿಚಯ ಇರುತ್ತಾರೆ. ತೋಟಪ್ಪನಿಗೆ ಇಬ್ಬರು ಮಕ್ಕಳು ಅವರೆಂದರೆ ಭರಮಪ್ಪ ಮತ್ತು ಸಿದ್ದಪ್ಪ. ಸದರಿ ತೋಟಪ್ಪನವರಿಗೆ ಅವರಿಗೆ ಒಬ್ಬ ಮಗಳು ಬಸಮ್ಮ ಇದ್ದರೆಂದರೆ ಸರಿ ಆದರೆ ಆಕೆ ಮೃತಹೊಂದಿರುತ್ತಾಳೆ. ಬಸಮ್ಮನಿಗೆ ಮಕ್ಕಳು ಇರುತ್ತಾರೆ. ಭರಮಪ್ಪ ಮತ್ತು ಸಿದ್ದಪ್ಪನ ಮಧ್ಯೆ ಪಾಲುವಿಭಾಗವಾಗಿರುವುದಿಲ್ಲ. ಸರ್ವೆ ನಂ. 338/ಎ/2 ರಲ್ಲಿ ಒಟ್ಟು 3 ಎಕರೆ 59 ಸೆಂಟ್ಸ ಹಾಗೂ 3 ಎಕರೆ 29 ಸೆಂಟ್ಸ ಜಮೀನು ಇರುತ್ತದೆ. ಸಿದ್ದಪ್ಪನು 3 ಎಕರೆ 59 ಸೆಂಟ್ಸ ಜಮೀನನ್ನು ಮಾರಾಟ ಮಾಡಿರುತ್ತಾರೆ. 2 ನೇ ವಾದಿಯ ತಂದೆಯ ಹೆಸರು ಸಿದ್ದಪ್ಪ ಎಂದರೆ ಸರಿ ಆತನು ಸದರಿ 3 ಎಕರೆ 59 ಸೆಂಟ್ಸ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ಸರಿ. ದಾವಾಸ್ತಿ ಸರ್ವೆ ನಂ. 338/ಎ/2 ಒಟ್ಟು 3 ಎಕರೆ 29 ಸೆಂಟ್ಸ ಸ್ವತ್ತು ಭರಮಜ್ಜನ ಆಸ್ತಿಯಾಗಿರುತ್ತದೆಂದರೆ ಸರಿ. ಸದರಿ ಆಸ್ತಿಯು ಭರಮಜ್ಜನ ಮರಣಾ ನಂತರ ಆತನ ಹೆಂಡತಿಗೆ ವರ್ಗಾವಣೆಯಾಗಿರುತ್ತದೆಂದರೆ ಸರಿ. ಭರಮಜ್ಜ ಮತ್ತು ಆತನ ಹೆಂಡತಿಗೆ ಮಕ್ಕಳು ಇರುವುದಿಲ್ಲವೆಂದರೆ ಸರಿ. ಸದರಿ ಭರಮಜ್ಜನ ಹೆಂಡತಿ ಪ್ರತಿವಾದಿಯ ಹೆಸರಿನಲ್ಲಿ ವಿಲ್ ನಾಮೆಯನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1996 ನೇ ಸಾಲಿನಲ್ಲಿಯೇ 2 ನೇ ವಾದಿಯ ಹೆಸರಿನಲ್ಲಿ ವಿಲ್ ನಾಮೆಯನ್ನು ಬರೆಯಲಾಗಿರುತ್ತದೆಂದು ನುಡಿಯುತ್ತಾರೆ. ಸದರಿ ವಿಲ್ ನಾಮೆಯನ್ನು ನೋಡಿರುತ್ತೇನೆಂದು ನುಡಿಯುತ್ತಾರೆ. ಸದರಿ ವಿಲ್ ನಾಮೆಯನ್ನು ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಬರೆದುಕೊಡಲಾಗಿರುತ್ತದೆ. ನಾನು 2 ನೇ ವಾದಿಯ ಹೆಸರಿನಲ್ಲಿ ಭರಮಜ್ಜನ ಹೆಂಡತಿಯು ವಿಲ್ ನಾಮೆಯನ್ನು

ಬರೆದುಕೊಟ್ಟಿರುವುದಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯು ಆಕೆಯ ಹೆಸರಿನಲ್ಲಿ ಭರಮಜ್ಜನ ಹೆಂಡತಿ ವಿಲ್ ನಾಮೆಯನ್ನು ಬರೆದುಕೊಟ್ಟ ನಂತರದಲ್ಲಿ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಸದರಿ ದಾವಾಸ್ತಿಗೂ ಹಾಗೂ ವಾದಿಗಳಿಗೂ ಯಾವುದೇ ಸಂಬಂಧವಿರುವುದಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯು ಪ್ರತಿವಾದಿಗೆ ಸೇರಬೇಕಾಗಿರುತ್ತದೆಂದರೆ ಸರಿಯಲ್ಲ, ವಾದಿಗಳಿಗೂ ಮತ್ತು ದಾವಾಸ್ತಿಗೂ ಯಾವುದೇ ಸಂಬಂಧವಿರುವುದಿಲ್ಲವೆಂದರೆ ಸರಿಯಲ್ಲ. ವಾದಿಗಳ ತಂದೆ ಹಾಗೂ ಭರಮಜ್ಜ ನನ್ನ ಚಿಕ್ಕಪ್ಪಂದಿರು. 2 ನೇ ವಾದಿಯು ನನ್ನ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡುವ ಸಂಬಂಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ